ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ

ವ್ಯವಸ್ಥಾಪಕ ಸಂಪಾದಕ : ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ಸಿಂಪಲ್ ಮದುವೆ ! ಆದರೆ ಬಜೆಟ್ ಮಾತ್ರ 10 ಕೋಟಿ!?

ಟಾಲಿವುಡ್‌ನ ಸೂಪರ್ ಸ್ಟಾರ್ ನಾಗಾರ್ಜುನ್ ಅವರ ಪುತ್ರ ನಾಗಚೈತನ್ಯ ಹಾಗೂ ಸ್ಟಾರ್ ನಟಿ ಸಮಂತಾ ವಿವಾಹವಾಗುತ್ತಿರುವುದು ಗೊತ್ತಿರುವ ವಿಚಾರವೇ. ಈ ಜೋಡಿ ಸಿಂಪಲ್ ಆಗಿ ಮದುವೆಯಾಗುತ್ತಿದ್ದು, ಬಜೆಟ್ ಮಾತ್ರ 10 ಕೋಟಿಯಂತೆ. ಹೌದು ನಾಗಚೈತನ್ಯ ಹಾಗೂ ಸಮಂತಾ ಅವರ ಮದುವೆ ಅಕ್ಟೋಬರ್ 6ರಂದು ಗೋವಾದಲ್ಲಿ ನಡೆಯಲಿದೆ. ಹಿಂದೂ ಮತ್ತು ಕ್ರಿಶ್ಚಿಯನ್ ಸಂಪ್ರದಾಯದಂತೆ ಮದುವೆ ನಡೆಯಲಿದ್ದು, ಆಪ್ತ 100 ಮಂದಿಗೆ ಮಾತ್ರ ಆಮಂತ್ರಣ ನೀಡಲಾಗಿದೆ.

ನಟ ಪ್ರಕಾಶ್ ರೈ ವಿರುದ್ಧ ಕೇಸ್ ದಾಖಲು

ಹಿರಿಯ ಪತ್ರಕರ್ತೆ ಹಾಗೂ ಹೋರಾಟಗಾರ್ತಿ ಗೌರಿ ಲಂಕೇಶ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸಿದ್ದ ಖ್ಯಾತ ನಟ ಪ್ರಕಾಶ್ ರೈ ವಿರುದ್ಧ ಬುಧವಾರ ಲಖನೌ ಕೋರ್ಟ್‌ನಲ್ಲಿ ಕೇಸ್ ದಾಖಲಿಸಲಾಗಿದೆ. ಪ್ರಧಾನಿ ಮೋದಿ ಅವರು ನನಗಿಂತ ದೊಡ್ಡ ನಟ ಎಂದು ವ್ಯಂಗ್ಯವಾಡಿದ್ದ ಪ್ರಕಾಶ್ ರೈ ವಿರುದ್ಧ ಕೇಸ್ ದಾಖಲಿಸಲಾಗಿದೆ.

ಎಸ್‌ಬಿಐ ವ್ಯವಸ್ಥಾಪಕ ನಿರ್ದೇಶಕರಾಗಿ ರಜನೀಶ್ ಕುಮಾರ್

ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ(ಎಸ್‌ಬಿಐ) ಮುಂದಿನ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ರಜನೀಶ್ ಕುಮಾರ್ ಅವರನ್ನು ನೇಮಿಸಲಾಗಿದೆ. ಪ್ರಸ್ತುತ ವ್ಯವಸ್ಥಾಪಕ ನಿರ್ದೇಶಕರಾಗಿರುವ ಅರುಂಧತಿ ಭಟ್ಟಾಚಾರ್ಯ ಅವರ ಅಧಿಕಾರಾವಧಿ ಇದೇ ಶುಕ್ರವಾರ (ಅಕ್ಟೋಬರ್ 7) ಕೊನೆಗೊಳ್ಳಲಿದೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 40 ಸಂಚಿಕೆ :327 ಗುರುವಾರ ಅ.5, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

ನೀರಾವರಿ ಸೌಲಭ್ಯಕ್ಕೆ ಒತ್ತಾಯಿಸಿ ಅನಿರ್ದಿಷ್ಟಾವಧಿ ಉಪವಾಸ ಆರಂಭ

ಬೇಲೂರು : ರಣಘಟ್ಟ ಚೆಕ್‌ಡ್ಯಾಂ, ಎತ್ತಿನಹೊಳೆ ಹಾಗೂ ಯಗಚಿ ಏತ ನೀರಾವರಿ ಮೂಲಕ ಹಳೇಬೀಡು, ಮಾದಿಹಳ್ಳಿ ಹಾಗೂ ಜಾವಗಲ್ ಹೋಬಳಿಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ಪಟ್ಟಣದ ನೆಹರು ನಗರ ವೃತ್ತದಲ್ಲಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಬುಧವಾರ ಆರಂಭಗೊಂಡಿದ್ದು, ರಸ್ತೆತಡೆ ನಡೆಸುವ ಮೂಲಕ ಸ್ವಾಮೀಜಿಗಳು ಇದಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ, ಇಲ್ಲಿಯವರೆಗೆ ಸರ್ಕಾರಕ್ಕೆ ಸಾಕಷ್ಟು ಮನವಿಗಳನ್ನು ಸಲ್ಲಿಸಿದ್ದರೂ ನಮ್ಮ ಮನವಿಗೆ ಯಾರೊಬ್ಬರೂ ಸ್ಪಂದಿಸಿಲ್ಲ. 2014-15ರಲ್ಲಿ ಅಪ್ರೂವಲ್ ಆಗಿರುವ ಕಾಮಗಾರಿಗೆ ಹಣ ಬಿಡುಗಡೆ ಮಾಡುವಂತೆ ಒತ್ತಾಯಿಸುತ್ತಿದ್ದೇವೆ. ಅಲ್ಲದೆ ಶಾಸಕ ವೈ.ಎನ್.ರುದ್ರೇಶಗೌಡರು ಸಚಿವರನ್ನು ಕರೆಸುತ್ತೇವೆ ಎಂದಿದ್ದರು. ನೀರಾವರಿಗೆ ಸಂಬಂಧಿಸಿದ ಸಚಿವರೇ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಸ್ಥಳಕ್ಕೆ ಬಂದು ಹಣ ಬಿಡುಗಡೆ ಮಾಡುತ್ತೇವೆ ಎಂದು ಪ್ರತಿಭಟನಾಕಾರರ ಎದುರೇ ಹೇಳಬೇಕು. ಅಲ್ಲದೆ ಪ್ರತಿಭಟನಾ ಸ್ಥಳಕ್ಕೆ ಶಾಸಕರು, ಸಂಸದರು, ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಜಿಲ್ಲಾಧಿಕಾರಿಗಳು ಮತ್ತು ಸಂಬಂಧಿಸಿದ ಅಧಿಕಾರಿಗಳು ಸಮಸ್ಯೆ ಬಗೆಹರಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಬೇಲೂರು ತಾಲ್ಲೂಕಿನ ಮೂಲಕ ಸುಮಾರು 250 ಕಿಲೋ ಮೀಟರ್ ದೂರದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ನಮ್ಮ ತಾಲ್ಲೂಕಿನ ಮೂಲಕವೇ ನೀರು ತೆಗೆದುಕೊಂಡು ಹೋಗಲಾಗುತ್ತಿದೆ. ಆದರೆ ಬೇಲೂರು ತಾಲ್ಲೂಕಿನ ರೈತರಿಗೆ ಕುಡಿಯಲು ನೀರು ಕೊಡಲು ಪ್ರಮುಖ ಮೂರು ಪಕ್ಷಗಳಿಂದ ಏಕೆ ಸಾಧ್ಯವಾಗುತ್ತಿಲ್ಲ ಎಂದು ಪ್ರಶ್ನಿಸಿದರು. *(-ಪುಟ 4ಕ್ಕೆ)*

> “ಕಳೆದ ಸೆಪ್ಟಂಬರ್ 4ರಂದು ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ ಸ್ಥಳೀಯ ಶಾಸಕ ವೈ.ಎನ್.ರುದ್ರೇಶ ಗೌಡರು ಸ್ಥಳಕ್ಕಾಗಮಿಸಿ, ತಾಲ್ಲೂಕಿನ ಕೆರೆ ಕಟ್ಟೆಗಳಿಗೆ ತಕ್ಷಣವೇ ನೀರು ಹರಿಸಲು ಸರ್ಕಾರದ ಗಮನ ಸೆಳೆಯಲಾಗುವುದು. ಇಲ್ಲದಿದ್ದಲ್ಲಿ ನನ್ನ ಶಾಸಕ ಸ್ಥಾನಕ್ಕೆ ರಾಜಿನಾಮೆ ನೀಡುತ್ತೇನೆ ಎಂದು ಹೇಳಿದ್ದರು. ಆದರೆ ಇಲ್ಲಿಯವರೆಗೂ ಸರ್ಕಾರದ ಗಮನ ಸೆಳೆಯುವಲ್ಲಿ ಅವರು ವಿಫಲರಾಗಿದ್ದಾರೆ .
>
> *-ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ.*

> “ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಅವರು ಸರ್ಕಾರದೊಂದಿಗೆ ಮಾತನಾಡಿ ಬೇಲೂರು ತಾಲ್ಲೂಕಿಗೆ ನೀರು ಹರಿಸಬೇಕಿತ್ತು, ಆದರೆ ಸುದ್ದಿಗೋಷ್ಠಿಯಲ್ಲಿ, ಮಠಾಧೀಶರ ನೇತೃತ್ವದಲ್ಲಿ ನಡೆಯುತ್ತಿರುವ ಹೋರಾಟ ಕಾನೂನು ಮೀರಿ ನಡೆದರೆ ಬಂಧಿಸಲಾಗುವುದು ಎಂದು ಹೇಳಿದ್ದಾರೆ. ಎ.ಮಂಜುಗೆ ತಾಕತ್ತಿದ್ದರೆ ಪ್ರತಿಭಟನಾ ಸ್ಥಳಕ್ಕೆ ಬಂದು ನಮ್ಮನ್ನು ಬಂಧಿಸಲಿ. ನಾವು ಎಲ್ಲದಕ್ಕೂ ಸಿದ್ಧರಾಗಿಯೇ ಬಂದಿದ್ದೇವೆ. ಅಲ್ಲದೆ ನಮ್ಮ ಬೇಡಿಕೆ ಈಡೇರಿ ನ್ಯಾಯ ಸಿಗುವವರೆಗೂ ಇಲ್ಲಿಯೇ ಕುಳಿತು ಧ್ಯಾನ ಮಾಡುತ್ತ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸುತ್ತೇವೆ.
>
> *-ಜಯಚಂದ್ರಶೇಖರ ಸ್ವಾಮೀಜಿ, ಕೇದಿಗೆ ಮಠ, ಕೋಳಗುಂದ.*

ಅಂದರ್ ಬಾಹರ್ ಅಡ್ಡೆ ಮೇಲೆ ಪೊಲೀಸರ ದಾಳಿ : 24 ಮಂದಿ ಸೆರೆ



ಅರಸೀಕೆರೆ: ನಗರದ ಶ್ರೀನಿವಾಸ ನಗರದಲ್ಲಿರುವ ಗಣೇಶ್ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಅಂದರ್ ಬಾಹರ್ ಇಸ್ಪೀಟು ಜೂಜಾಟದಲ್ಲಿ ತೊಡಗಿದ್ದ 24 ಜನರನ್ನು ಪೊಲೀಸರು ಬಂಧಿಸಿದ್ದು, ಪಣಕ್ಕಿಟ್ಟಿದ್ದ 4 ಲಕ್ಷ ರೂ. ವಶಪಡಿಸಿಕೊಂಡಿದ್ದಾರೆ.

ಇಸ್ಪೀಟು ಆಟದಲ್ಲಿ ತೊಡಗಿರುವ ಬಗ್ಗೆ ಮಾಹಿತಿ ಬಂದ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ಕುಮಾರ್ ಶಹಾಪುರವಾಡ್ ನೇತೃತ್ವದಲ್ಲಿ ಮಂಗಳವಾರ ರಾತ್ರಿ 9.15 ರಲ್ಲಿ ದಾಳಿ ನಡೆಸಲಾಯಿತು. ಈ ವೇಳೆ ರೆಸ್ಟೋರೆಂಟ್‌ನ ಮೂರನೇ ಮಹಡಿಯಲ್ಲಿ ಜೂಜಾಟದಲ್ಲಿ ತೊಡಗಿದ್ದ 24 ಜನರನ್ನು ಬಂಧಿಸಿದ್ದು , ಅವರಿಂದ 4 ಲಕ್ಷ ರೂ. ನಗದು , 24 ಮೊಬೈಲ್, 6 ದ್ವಿಚಕ್ರ ಚಕ್ರ ವಾಹನ, ಒಂದು ಲ್ಯಾಪ್ ಟ್ಯಾಪ್ ಹಾಗೂ ಸ್ಥಳದಲ್ಲಿದ್ದ ಪರಿಕರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಬಂಧಿತರ ಗುಂಪಿನಲ್ಲಿ ಸರ್ಕಾರಿ ಇಂಜಿನಿಯರ್‌ವೊಬ್ಬರು ಇದ್ದಾರೆ.

ಬಲ್ಲ ಮೂಲಗಳ ಪ್ರಕಾರ ಎಲ್ಲಾ 24 ಬಂಧಿತರು ಜಾಮೀನು ಪಡೆದು ಬಿಡುಗಡೆಗೊಂಡಿದ್ದಾರೆಂದು ತಿಳಿದು ಬಂದಿದೆ.

ಕಾರ್ಯಾಚರಣೆಯಲ್ಲಿ ಡಿವೈಎಸ್‌ಪಿ ದಶರಥಮೂರ್ತಿ, ಸರ್ಕಲ್ ಇನ್ಸ್‌ಪೆಕ್ಟರ್ ಕೆ.ಪ್ರಭಾಕರ್ ಹಾಗೂ ಸಿಬ್ಬಂದಿ ಇದ್ದರು.

ಪ್ರಕರಣ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು , ಮುಂದಿನ ತನಿಖೆ ಕೈಗೊಳ್ಳಲಾಗಿದೆ.

ಡಿಸೆಂಬರ್ ಒಳಗೆ ಕೆರೆಗೆ ನೀರು ಹರಿಸದಿದ್ದರೆ ಬೃಹತ್ ಪಾದಯಾತ್ರೆ

DIST. WORKING JOURNALIST ASSOCIATION

ಹಾಸನ : ಡಿಸೆಂಬರ್ ಒಳಗೆ ಸಾಲಗಾಮೆ ಹೋಬಳಿಯ ಎಲ್ಲಾ ಕೆರೆಗಳಿಗೆ ನೀರು ಹರಿಸದಿದ್ದರೆ ಪ್ರತಿಭಟನೆ ನಡೆಸಿ, ಬೆಂಗಳೂರುವರೆಗೂ ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪ್ರೀತಮ್ ಜೆ.ಗೌಡ ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಅವರು ಮಾತನಾಡಿ, ಸಾಲಗಾಮೆ ಹೋಬಳಿ ಸುತ್ತಮುತ್ತ ವರ್ಷಕ್ಕೆ ಎರಡು ಮೂರು ಬೆಳೆ ಬೆಳೆಯಬೇಕಾದರೆ ಮಳೆ ಆಧಾರಿತ ಕಷ್ಟವಾಗುತ್ತಿದೆ. ಇಲ್ಲಿನ ರೈತರು ಮಾಡಿದ ಸಾಲ ತೀರಿಸಲು ಸಾಧ್ಯವಾಗದೆ ಆರ್ಥಿಕ ಹೊರೆ ಹೆಚ್ಚಾಗುತ್ತಿದೆ ಎಂದರು.

ಹೆಚ್ಚು ಮಳೆ ಬಂದರೂ ಕೂಡ ಇಲ್ಲಿಯವರೆಗೂ ಕೆರೆ ತುಂಬುತ್ತಿಲ್ಲ. ಜಿಲ್ಲೆಯಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳೂ ಏತ ನೀರಾವರಿ ಮೂಲಕ ಕೆರೆಗೆ ನೀರು ತುಂಬಿಸುತ್ತಿಲ್ಲ. ಕೆರೆಯ ಹೂಳು ತೆಗೆಸದೆ ನೀರು ನಿಲ್ಲುತ್ತಿಲ್ಲ. ಇದರಿಂದ ಜನ-ಜಾನುವಾರುಗಳಿಗೆ ಕುಡಿಯುವುದಕ್ಕೆ ನೀರು ಸಿಗುತ್ತಿಲ್ಲ. ಕೂಡಲೇ ಎರಡು ಪಕ್ಷಗಳು ಸಾಲಗಾಮೆ ಹೋಬಳಿ ಸುತ್ತ ಎಲ್ಲಾ ಕೆರೆಗಳಿಗೆ ನೀರು ತುಂಬಿಸಲು ಗಮನ ನೀಡಬೇಕು. ಇಲ್ಲವಾದರೆ ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷ ಬಿ.ಎಸ್.ಯಡಿಯೂರಪ್ಪ , ಮುಖಂಡ ಸಿ.ಟಿ.ರವಿ, ಜಿಲ್ಲಾಧ್ಯಕ್ಷ ಯೋಗಾ ರಮೇಶ್ ನೇತೃತ್ವದಲ್ಲಿ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕೂಡಲೇ ತಜ್ಞರ ಸಮಿತಿ ರಚಿಸಿ ಚರ್ಚೆ ಮಾಡುವುದರ ಮೂಲಕ ನಕ್ಷೆ ಸಿದ್ಧಪಡಿಸಿ ತಕ್ಷಣದಲ್ಲಿ ಕಾರ್ಯಪ್ರವೃತ್ತರಾಗಬೇಕು. ಸಾಲಗಾಮೆ ಹೋಬಳಿ ಭಾಗದಲ್ಲಿ ಒಟ್ಟು 40 ಕೆರೆಗಳು ಇದ್ದು, ಇದರ ಟೆಕ್ನಿಕಲ್ ಮಾಹಿತಿಯನ್ನು ಸರಕಾರ ಪಡೆಯಬೇಕು ಎಂದು ಸಲಹೆ ನೀಡಿದರು.

ಈ ಭಾಗಕ್ಕೆ ಸೇರುವ ಶಾಸಕರು ಯಾವ ಕೆಲಸವನ್ನೂ ಮಾಡಿಲ್ಲ. ಕೂಡಲೇ ಎಚ್ಚೆತ್ತುಕೊಂಡು ಶಾಸಕರು ಕೆಲಸ ಮಾಡಬೇಕು. ಇಲ್ಲದಿದ್ದರೆ ಕೆರೆಗೆ ನೀರು ಹರಿಸುವಂತೆ ಶಾಸಕರ ವಿರುದ್ಧ ಪ್ರತಿಭಟನೆ ಮಾಡಲಾಗುವುದು ಎಂದರು.

(-4ನೇ ಪುಟಕ್ಕೆ)

ವಾಡಿಕೆ ಮೀರಿ ಧರಣಿ ತಣಿಸಿದ ಮುಂಗಾರು ಮುಸಲಧಾರೆ

ಹಾಸನ: ಅಂತೂ ಇಂತೂ ಈ ಬಾರಿ ಮುಂಗಾರು ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ. ಕಳೆದ ಬಾರಿ ವಾಡಿಕೆಗಿಂತ ಕಡಿಮೆ ಮಳೆಯಾಗಿತ್ತು. ಭೀಕರ ಬರ ಉಂಟಾಗಿ ಹನಿ ನೀರಿಗೂ ಹಾಹಾಕಾರ ಉಂಟಾಗಿತ್ತು. ಆದರೆ ಮುನಿಸಿಕೊಂಡಿದ್ದ ಮುಸಲಧಾರೆ ಧರಣಿಯನ್ನು ತಣಿಸಿದೆ. ಈ ಬಾರಿ ವಾಡಿಕೆಗಿಂತ ಜಿಲ್ಲೆಯಾದ್ಯಂತ ಹೆಚ್ಚು ಮುಂಗಾರು ಮಳೆಯಾಗಿದೆ. ರೈತರು ಖುಷಿಯಿಂದ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ.

ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಈ ಸಲ ವರುಣ ಕೃಪೆ ತೋರಿದ್ದಾನೆ. ವರ್ಷಧಾರೆ ಕರುಣೆ ತೋರಿದ ಪರಿಣಾಮ ಬತ್ತಿ ಹೋಗಿ ಮರುಭೂಮಿಯಂತಾಗಿದ್ದ ಕೆರೆ ಕುಂಟೆಗಳಲ್ಲಿ ಕೊಂಚ ಜೀವಜಲ ಬಂದಿದೆ. ಅಲ್ಲಲ್ಲಿ ಹಸಿರು ಚಿಗುರು ಬಂದಿದ್ದು, ಜಾನುವಾರುಗಳಿಗೆ ಮೇವಿನ ಕೊರತೆ ಸ್ವಲ್ಪ ನೀಗಿದೆ. ಜನ ಜಾನುವಾರುಗಳು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

ಬುಡ ಸಮೇತ ಧರೆಗುರುಳಿ ಮಣ್ಣು ಪಾಲಾಗಿರುವ ಸ್ಥಿತಿ ತಲುಪಿದ್ದ ತೆಂಗಿನ ಮರಗಳಿಗೆ ಕೂಡ ಮತ್ತೆ ಜೀವ ಬಂದಂತಾಗಿದೆ. 2016ರ ಸೆಪ್ಟೆಂಬರ್‌ನಲ್ಲಿ 35.1 ಎಂ.ಎಂ.ನಷ್ಟು ಮಳೆಯಾಗಿತ್ತು. ಈ ಬಾರಿ 2017ರ ಕಳೆದ ತಿಂಗಳಲ್ಲಿ 184.4 ಎಂ.ಎಂ. ಮಳೆಯಾಗಿತ್ತು. ಅರಸೀಕೆರೆಯಲ್ಲಿ ಕಳೆದ ಬಾರಿ 51.6 ಎಂ.ಎಂ. ಮುಂಗಾರು ಮಳೆಯಾಗಿತ್ತು. ಈ ಬಾರಿ 131.9 ಎಂ.ಎಂ. ಮುಂಗಾರು ಮಳೆಯಾಗಿದ್ದು, ಸಾಮಾನ್ಯಕ್ಕಿಂತ ವಾಡಿಕೆ ಮಳೆ ಹೆಚ್ಚಾಗಿದೆ. ಹಾಸನ ತಾಲ್ಲೂಕಿನಲ್ಲೂ ಈ ಬಾರಿ ಮುಂಗಾರು ಕಳೆದ ವರ್ಷಕ್ಕಿಂತ ಶೇ.43ರಷ್ಟು ಜಾಸ್ತಿಯಾಗಿದೆ. ಎಲ್ಲಾ ತಾಲ್ಲೂಕುಗಳಲ್ಲೂ ಮುಸಲಧಾರೆ ಶೇ.10 ರಿಂದ 50ರಷ್ಟು ಹೆಚ್ಚಾಗಿದ್ದು , ಅನ್ನದಾತರಲ್ಲಿ ಆಶಾಭಾವನೆ ಮೂಡಿಸಿದೆ.

2016ರ ಸೆಪ್ಟೆಂಬರ್‌ನಲ್ಲಿ 41.7 ಮಿ.ಮೀ. ಮಳೆಯಾಗಿದೆ. ಈ ವರ್ಷ ಸೆಪ್ಟೆಂಬರ್‌ನಲ್ಲಿ 219 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಜನವರಿಯಿಂದ ಅಕ್ಟೋಬರ್‌ವರೆಗೂ 479.2 ಮಿಲಿ ಮೀಟರ್ ಮಳೆ ಬಿದ್ದು ಶೇ.61ರಷ್ಟು ಮಳೆಯಾಗಿತ್ತು.

ಈ ವರ್ಷ ಜನವರಿಯಿಂದ ಇಲ್ಲಿಯವರೆಗೆ 785.3 ಮಿಲಿ ಮೀಟರ್ ಮಳೆ ಬಿದ್ದಿದ್ದು , ಶೇ.93.4ರಷ್ಟು ಮಳೆಯಾಗಿದೆ. 2016ರ ಕಳೆದ ವರ್ಷಕ್ಕೆ ಹೋಲಿಸಿದರೆ 2017ರ ಈ ವರ್ಷ ಜಿಲ್ಲೆಯಾದ್ಯಂತ 32 ಮಿ.ಮೀ.ಗೂ ಹೆಚ್ಚು ಮುಂಗಾರು ಮಳೆಯಾಗಿದೆ. ಕೈ ಕೆಸರಾದರೆ ಬಾಯಿ ಮೊಸರು ಎಂಬಂತೆ ಭೂತಾಯಿಯನ್ನು ಅವಲಂಬಿಸಿ ಬದುಕಿನ ಬಂಡಿ ಸಾಗಿಸುತ್ತಿರುವ ನೇಗಿಲ ಯೋಗಿಗಳನ್ನು ಮಳೆ ನಿರಾಳವಾಗಿಸಿದೆ.

ತಾಲ್ಲೂಕು	ಜನವರಿಯಿಂದ ಇಲ್ಲಿಯವರೆಗೆ ಬಿದ್ದ ಮಳೆ (ಎಂ.ಎಂ.ಗಳಲ್ಲಿ)			ಕಳೆದ ವರ್ಷ ಜನವರಿಯಿಂದ ಸೆಪ್ಟೆಂಬರ್ ತಿಂಗಳವರೆಗೆ ಬಿದ್ದ ಮಳೆ (ಎಂ.ಎಂ.ಗಳಲ್ಲಿ)		
	ಸಾಮಾನ್ಯ	ವಾಡಿಕೆ	ಶೇ.	ಸಾಮಾನ್ಯ	ವಾಡಿಕೆ	ಶೇ.
ಆಲೂರು	761	715.7	94	761	544.8	71.6
ಅರಕಲಗೂಡು	665	626.2	94.2	665	408.3	61.4
ಅರಸೀಕೆರೆ	477	629.0	131.9	477	246.2	51.6
ಬೇಲೂರು	787	602.7	76.6	787	403.2	51.2
ಚ.ರಾ.ಪಟ್ಟಣ	464	553.8	119.4	464	232.9	50.2
ಹಾಸನ	606	700.7	115.6	606	441.0	72.8
ಹೊ.ನ.ಪುರ	550	509.8	92.7	550	266.3	48.4
ಸಕಲೇಶಪುರ	1972	1532.1	77.7	1972	1290.7	65.5
ಒಟ್ಟು	785.3	733.8	93.4	785.3	479.2	61.0

ಒಂಟಿ ಮಹಿಳೆ ಕೊಲೆ : ನಾಲ್ವರಿಗೆ ಜೀವಾವಧಿ ಶಿಕ್ಷೆ

ಹಾಸನ : ಒಂಟಿ ಮಹಿಳೆ ಕೊಲೆ ಮಾಡಿ ಚಿನ್ನಾಭರಣ ದರೋಡೆ ಮಾಡಿದ್ದ ನಾಲ್ವರು ಅಪರಾಧಿಗಳಿಗೆ ಹಾಸನದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಮೂರ್ತಿ ಶ್ಯಾಮ್ ಅವರು ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ.

ಬಿ.ಚೋಳೇನಹಳ್ಳಿಯ ಮನು, ಮಂಜ, ಸುನಿಲ್, ಬೆಂಗಳೂರಿನ ಹೊಸಕೇರಹಳ್ಳಿಯ ಮಂಜ ಶಿಕ್ಷೆಗೊಳಗಾದವರು.

ಅಪರಾಧಿಗಳಿಗೆ ತಲಾ ರೂ.75 ಸಾವಿರ ದಂಡ ವಿಧಿಸಲಾಗಿದೆ.

2013ರ ಸೆ.30ರಂದು ಹಾಸನ ತಾಲ್ಲೂಕಿನ ಚಿಕ್ಕಹೊನ್ನೇನಹಳ್ಳಿಯ ಮನೆಗೆ ನುಗ್ಗಿ ತೇಜಸ್ವಿನಿ ಎಂಬುವರನ್ನು ಹತ್ಯೆ ಮಾಡಿ ಚಿನ್ನಾಭರಣ ದೋಚಿದ್ದರು.

ಈ ಸಂಬಂಧ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು

2025ಕ್ಕೆ ಜಿಲ್ಲೆ : ವ್ಯವಸ್ಥಿತ ಸಂತೆಗಳ ರೂಪುರೇಷೆ ಅತ್ಯಗತ್ಯ

▯ ಎಸ್.ಎಸ್.ಪಾಶಾ

ನನ್ನ ಕನಸಿನ ಹಾಸನ ಜಿಲ್ಲೆ-2025ರ ಸಂಬಂಧ ಚರ್ಚೆ ಆರಂಭವಾಗಿರುವುದು ಸ್ವಾಗತಾರ್ಹ ವಿಚಾರ.

ಜಿಲ್ಲೆಯಲ್ಲಿ ನಡೆಯುವ ಸಂತೆಗಳು ಪುರಾತನ ಮಾರಾಟದ ವ್ಯವಸ್ಥೆಯಾಗಿದೆ. ಗ್ರಾಮೀಣರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಈ ವ್ಯವಸ್ಥೆ ನೂರಾರು ವರ್ಷಗಳಿಂದ ಜಾರಿಯಲ್ಲಿದೆ. ಸಾಕಷ್ಟು ಜನರಿಗೆ ಸಂತೆಯಲ್ಲಿ ತಮಗೆ ಬೇಕಾದ ಪದಾರ್ಥಗಳು ನೇರವಾಗಿ ಸಿಗುತ್ತವೆ ಹಾಗೂ ಕಡಿಮೆ ದರದಲ್ಲಿ ಸಿಗುತ್ತವೆ ಎಂಬ ಪರಿಕಲ್ಪನೆಯಲ್ಲಿ ಸಂತೆಗೆ ಹೋಗುತ್ತಾರೆ.

ಸಂತೆ ಎಂದರೆ ಅದಕ್ಕೆ ಬಿಗ್ ಬಜಾರ್‌ನ ಸ್ವರೂಪವಿದೆ. ಪುರಿ, ಮಿಠಾಯಿ, ತರಕಾರಿ, ಪೂಜಾ ಸಾಮಗ್ರಿ ಹೀಗೆ ಎಲ್ಲವೂ ಒಂದೇ ಕಡೆ ಸಿಗುವ ಜಾಗ ಸಂತೆ. ಇದು ಹಳೆಯ ವ್ಯವಸ್ಥೆಯಾದರೂ ಸಹ ಜನರು ಅದನ್ನು ನಿರಂತರವಾಗಿ ಬಳಸಿಕೊಳ್ಳುತ್ತಿದ್ದಾರೆ. ಆದರೆ ಸಂತೆ ನಡೆಯುವ ಭಾಗಗಳು ಯಾವ ರೀತಿ ಇವೆ ಎಂದರೆ, ಶುಚಿತ್ವ, ನೈರ್ಮಲ್ಯ ಇಲ್ಲ. ನಾವು ಧರಿಸುವ ಚಪ್ಪಲಿಗಳನ್ನು ಎಸಿ ಅಂಗಡಿಗಳಿಂದ ಖರೀದಿಸುತ್ತೇವೆ. ಆದರೆ ಸಂತೆಯಲ್ಲಿ ನಾವು ತಿನ್ನುವ ಆಹಾರ ಪದಾರ್ಥಗಳನ್ನು ನೆಲದ ಮೇಲಿಟ್ಟು ವ್ಯಾಪಾರ ಮಾಡುತ್ತಾರೆ. ಅದನ್ನು ನಾವು ಆರೋಗ್ಯ ಕಾಪಾಡಿಕೊಳ್ಳುವ ದೃಷ್ಟಿಯಿಂದ ಖರೀದಿಸಿ ತರುತ್ತೇವೆ. ಆದರೆ ನಮ್ಮ ಆರೋಗ್ಯಕ್ಕೆ ಅದು ಎಷ್ಟು ಪೂರಕವಾಗಿರುತ್ತದೆ? ತಿಳಿದುಕೊಳ್ಳಲು ಪ್ರಯತ್ನಪಟ್ಟವರಾರು?

ಸಾಕಷ್ಟು ಗ್ರಾಮ ಪಂಚಾಯಿತಿ, ಹೋಬಳಿ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ನಡೆಯುತ್ತಿರುವ ಸಂತೆಗಳು ಒಂದು ಮಾರಾಟದ ವ್ಯವಸ್ಥೆ. ಸಂತೆಗಳ ವಿಶೇಷತೆ ಏನೆಂದರೆ, ಆಯಾ ಕಾಲಕ್ಕೆ ಬೆಳೆಯುವ ಪದಾರ್ಥಗಳು ಜನರಿಗೆ ಸಿಗುತ್ತವೆ. ಸಂತೆಯಲ್ಲಿ ವಿವಿಧ ಪದಾರ್ಥಗಳನ್ನು ಮಾರಾಟ ಮಾಡುವ ವ್ಯಾಪಾರಸ್ಥರ ಜೀವನ ಸಂತೆಗಳನ್ನೇ ಅವಲಂಬಿಸಿದೆ. ಒಂದೊಂದು ಊರಲ್ಲಿ ಒಂದೊಂದು ದಿನ ಸಂತೆ ನಡೆಯುತ್ತದೆ. ಸಂತೆ ವ್ಯಾಪಾರ ಮಾಡುವವರಿಗೆ ಒಂದು 'ಜಾಬ್' ಸಿಕ್ಕಿದಂತೆ. ಎಷ್ಟೋ ಜನರಿಗೆ ಹತ್ತಿರವಾದ ಈ ಸಂತೆ ಎಂಬ ವ್ಯವಸ್ಥೆಯಲ್ಲಿ ಸೂಕ್ತ ಬದಲಾವಣೆ ತರುವಲ್ಲಿ , ನಿರ್ವಹಣೆ ಮಾಡುವಲ್ಲಿ ಸರ್ಕಾರ ಆಸಕ್ತಿ ತೋರುತ್ತಿಲ್ಲ. ಸಂತೆಗೆ ಬರುವ ರೈತರಿಗೆ ಶೌಚಾಲಯ, ಉಳಿದುಕೊಳ್ಳಲು ವ್ಯವಸ್ಥೆ , ಶುಚಿತ್ವ, ಮಳೆ, ಗಾಳಿ, ಬಿಸಿಲಿನಿಂದ ರಕ್ಷಿಸಿಕೊಳ್ಳಲು ತಲೆಯ ಮೇಲೊಂದು ಮರೆ ಯಾವುದೂ ಇಲ್ಲ. ಬಿಸಿಲು, ಮಳೆಯಿಂದ ರಕ್ಷಿಸಿಕೊಳ್ಳಲು ವ್ಯಾಪಾರಗಾರರೇ ಸ್ವತಃ ವ್ಯವಸ್ಥೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಇದೆ.

ಪ್ರಪ್ರಥಮವಾಗಿ ಹಾಸನ ಜಿಲ್ಲೆಯಲ್ಲಿ ನಡೆಯುವ ಸಂತೆಗಳಲ್ಲಿ ಮಾದರಿ ವ್ಯವಸ್ಥೆ ಮಾಡಬೇಕು. ಸರ್ಕಾರ ಹಾಗೂ ಸಂಬಂಧಿಸಿದವರು ಒಂದು ಅಧ್ಯಯನ ಮಾಡಬೇಕು. ಸಂತೆಗಳ ಸಮಸ್ಯೆಯ ಬಗ್ಗೆ ಒಂದು ವರದಿ ತಯಾರು ಮಾಡಿ, ವ್ಯಾಪಾರಸ್ಥರು, ರೈತರು ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾದ ಅಗತ್ಯವಿದೆ. ಸಂತೆಗಳ ನಿರ್ವಹಣೆಗೆ ತಾಲ್ಲೂಕು ಹಾಗೂ ಜಿಲ್ಲಾ ಸಮಿತಿಗಳನ್ನು ರಚನೆ ಮಾಡಿ ಸಂತೆಗಳು ವ್ಯವಸ್ಥಿತವಾಗಿ ನಡೆಯುವಂತೆ ರೂಪುರೇಷೆ ಹಾಕಿಕೊಳ್ಳಬೇಕು.

ದನಕರುಗಳಿಗೆ ಹಗ್ಗ, ಮಚ್ಚು, ನೇಗಿಲು, ಅರಿಶಿಣ ಕುಂಕುಮ, ವಿಭೂತಿ, ಮಸಾಲೆ ಪದಾರ್ಥಗಳು, ಮೀನು, ಮಾಂಸ ಹೀಗೆ ಎಲ್ಲವೂ ಸಂತೆಯಲ್ಲಿ ಒಂದೇ ಕಡೆ ದೊರೆಯುವುದರಿಂದ ಅದು ಬಿಗ್ ಬಜಾರ್‌ಗಿಂತ ಕಡಿಮೆ ಏನಲ್ಲ. ಹಾಗಾಗಿ ಸಂತೆ ಜನರಿಗೆ ಬಹಳ ಉಪಯುಕ್ತ.

ನಗರದ ಎನ್.ಸಿ.ಸಿ. ಆಫೀಸ್, ರೈಲ್ವೆ ಸ್ಟೇಷನ್‌ಗೆ ಸಂತೆ ವಿಸ್ತರಣೆಯಾಗಿದೆ. ರಿಂಗ್ ರಸ್ತೆಯಲ್ಲಿ ಆಯುಧಪೂಜೆ ಹಬ್ಬದ ನಿಮಿತ್ತ ಬಾಳೆ ಎಲೆ, ಹಣ್ಣು ಕಾಯಿ, ಮಾವಿನ ಸೊಪ್ಪನ್ನು ಮಾರಿದ್ದಾರೆ. ತಮ್ಲಾಪುರಕ್ಕೆ ಹೋಗುವ ರಸ್ತೆಯಲ್ಲಿ ಮಿನಿ ಸಂತೆ ಶುರುವಾಗಿದೆ. ಆಡಳಿತ ನಿರಂತರ ಸಂತೆಗೆ ಮಹತ್ವ ಕೊಡಲೇ ಇಲ್ಲ. ಸುಂಕ ವಸೂಲಿಗಷ್ಟೇ ಆದ್ಯತೆ ಕೊಟ್ಟಿತೇ ವಿನಃ ಸಂತೆಗಳ ಅಭಿವೃದ್ಧಿಗೆ ಗಮನ ಹರಿಸಲೇ ಇಲ್ಲ.

(-4ನೇ ಪುಟಕ್ಕೆ)

ಅ.8ರಂದು ರಾಜ್ಯ ಮಟ್ಟದ ವಿಶ್ವಕರ್ಮ ಜಯಂತ್ಯೋತ್ಸವ



ಹಾಸನ : ಭಾರತೀಯ ಸಂಸ್ಕೃತಿಯನ್ನು ಶಿಲ್ಪಕಲೆಗಳ ಮೂಲಕ ವಿಶ್ವಕ್ಕೆ ಪರಿಚಯಿಸಿದ ವಿಶ್ವಕರ್ಮ ಜನಾಂಗದ ಸಮಸ್ಯೆಗಳ ಪರಿಹಾರಕ್ಕಾಗಿ ರಾಜ್ಯ ಮಟ್ಟದ 9ನೇ ವಿಶ್ವಕರ್ಮ ಜಯಂತ್ಯೋತ್ಸವವನ್ನು ಅಕ್ಟೋಬರ್ 8ರಂದು ಹಮ್ಮಿಕೊಂಡಿರುವುದಾಗಿ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ವಿ. ಹರೀಶ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಅವರು ಮಾತನಾಡಿ, ಬೆಂಗಳೂರಿನ ಅರಮನೆ ಮೈದಾನದಲ್ಲಿ ಕಾರ್ಯಕ್ರಮ ಜರುಗಲಿದ್ದು, ವಿಶ್ವಕರ್ಮ ಜನಾಂಗದ ಮುಖಂಡ ನಂಜುಂಡಿ ನೇತೃತ್ವ ವಹಿಸಲಿದ್ದಾರೆ ಎಂದರು. ಆಧ್ಯಾತ್ಮಿಕ ಗುರು ರವಿಶಂಕರ್ ಗುರೂಜಿ, ಕನ್ನಡ ಚಿತ್ರನಟ ರವಿಚಂದ್ರನ್ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ ಎಂದರು. *(-ಪುಟ 4ಕ್ಕೆ)*



ಜಿಲ್ಲಾ ಗುತ್ತಿಗೆದಾರರ ಸಂಘ, ಹಾಸನ

ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಮ್ಮೇಳನ

ದಿನಾಂಕ : 10-10-2017
ಹಾಗೂ 11-10-2017 ರಂದು
ಸ್ಥಳ : ಅರಮನೆ ಆವರಣ, ಬೆಂಗಳೂರು

ಉದ್ಘಾಟನೆ :
ಶ್ರೀ ಸಿದ್ದರಾಮಯ್ಯನವರು
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಸ್ಮರಣ ಸಂಚಿಕೆ ಬಿಡುಗಡೆ :
ಶ್ರೀ ಹೆಚ್.ಡಿ.ದೇವೇಗೌಡರು
ಮಾಜಿ ಪ್ರಧಾನ ಮಂತ್ರಿಗಳು, ಭಾರತ ಸರ್ಕಾರ

ಮುಖ್ಯ ಅತಿಥಿಗಳು :

ಸನ್ಮಾನ್ಯ ಶ್ರೀ ರಾಮಲಿಂಗಾರೆಡ್ಡಿ ರವರು
ಮಾನ್ಯ ಗೃಹ ಸಚಿವರು, ಕರ್ನಾಟಕ ಸರ್ಕಾರ.
ಸನ್ಮಾನ್ಯ ಶ್ರೀ ಹೆಚ್.ಕೆ.ಪಾಟೀಲ್‌ರವರು
ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು, ಕರ್ನಾಟಕ ಸರ್ಕಾರ
ಸನ್ಮಾನ್ಯ ಶ್ರೀ ಹೆಚ್.ಸಿ.ಮಹದೇವಪ್ಪನವರು
ಮಾನ್ಯ ಲೋಕೋಪಯೋಗಿ ಸಚಿವರು, ಕರ್ನಾಟಕ ಸರ್ಕಾರ
ಸನ್ಮಾನ್ಯ ಶ್ರೀ ಎಂ.ಬಿ.ಪಾಟೀಲ್‌ರವರು
ಮಾನ್ಯ ಜಲ ಸಂಪನ್ಮೂಲ ಸಚಿವರು, ಕರ್ನಾಟಕ ಸರ್ಕಾರ

ಈ ರಾಜ್ಯ ಸಮ್ಮೇಳನದಲ್ಲಿ ಪಾಲ್ಗೊಳ್ಳ ಬಯಸುವ ಜಿಲ್ಲೆಯ ಎಲ್ಲಾ ಗುತ್ತಿಗೆದಾರ ಬಂಧುಗಳು ಜಿಲ್ಲಾ ಗುತ್ತಿಗೆದಾರರ ಸಂಘದಲ್ಲಿ ನೋಂದಣಿ ಮಾಡಿಸಿಕೊಂಡು ಸಮ್ಮೇಳನವನ್ನು ಯಶಸ್ವಿಗೊಳಿಸಬೇಕೆಂದು ಕೋರುತ್ತೇವೆ.

ಕಾರ್ಲೆ ಇಂದ್ರೇಶ್
ಅಧ್ಯಕ್ಷರು, ಜಿಲ್ಲಾ ಗುತ್ತಿಗೆದಾರರ ಸಂಘ, ಹಾಸನ.

ಹೆಚ್.ಸಿ.ವಿಜಯಕುಮಾರ್
ಕಾರ್ಯದರ್ಶಿ, ಜಿಲ್ಲಾ ಗುತ್ತಿಗೆದಾರರ ಸಂಘ, ಹಾಸನ.

ಹಾಗೂ ಎಲ್ಲಾ ಪದಾಧಿಕಾರಿಗಳು, ಜಿಲ್ಲಾ ಗುತ್ತಿಗೆದಾರರ ಸಂಘ, ಹಾಸನ.


॥ ಓಂ ನಮೋ ಭಗವತೇ ಶ್ರೀ ಬಾಲಗಂಗಾಧರನಾಥಾಯ ನಮಃ ॥ ॥ ಶ್ರೀ ಕಾಲಭೈರವೇಶ್ವರಸ್ವಾಮಿ ಪ್ರಸನ್ನ ॥ ॥ ಜೈ ಶ್ರೀ ಗುರುದೇವ್ ॥
ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಹಾಸನ
ಗುರು ತೋರಿದ ದಾರಿ ತಿಂಗಳ ಮಾಮನ ತೇರಿನ ಪವಿತ್ರ ಹುಣ್ಣಿಮೆ ಕಾರ್ಯಕ್ರಮ
ನಾಲ್ಕನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ
ದಿನಾಂಕ 06-10-2017ನೇ ಶುಕ್ರವಾರ ಬೆಳಿಗ್ಗೆ 10-00 ಗಂಟೆಗೆ
ಪ್ರಾತಃಸ್ಮರಣೀಯ ಯುಗಯೋಗಿ ಪರಮಪೂಜ್ಯ ಜಗದ್ಗುರು ಪದ್ಮಭೂಷಣ
ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮಿಗಳವರ
ಸಂಸ್ಮರಣೋತ್ಸವ
ಹಾಗೂ
ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮಿಗಳವರಿಗೆ
ಗುರುವಂದನೆ ಮತ್ತು ರಜತ ತುಲಾಭಾರ
ಸಂಜೆ 6-30 ಗಂಟೆಗೆ
ಬಿ.ಜಿ.ಎಸ್. ಬೆಳದಿಂಗಳೋತ್ಸವ
ಮತ್ತು
ದಿನಾಂಕ 07-10-2017ನೇ ಶನಿವಾರ ಬೆಳಿಗ್ಗೆ 10-00 ಗಂಟೆಗೆ
ಬೃಹತ್ ಉದ್ಯೋಗ ಮೇಳ
ಸ್ಥಳ : ಶ್ರೀ ಆದಿಚುಂಚನಗಿರಿ ಆಂಗ್ಲ ಮಾಧ್ಯಮ ಶಾಲೆ, ಎಂ.ಜಿ.ರಸ್ತೆ, ಹಾಸನ
ಸ್ವಾಗತ ಕೋರುವವರು :
ಹಾಸನ ತಾಲ್ಲೂಕು ಮತ್ತು ಜಿಲ್ಲೆಯ ಸಮಸ್ತ ಭಕ್ತ ವೃಂದ